5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,
ಕಾರ್ಯನಿರ್ವಹಣೆಃ ಪುತ್ತೂರು, ದ.ಕ.

**ಸೆಷನ್ಸ್ ಕೇಸ್ ನಂಬ್ರ 5002/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಇಬ್ರಾಹಿಂ ಕೆ.ಎಂ. | ಪ್ರಾಸಾಃ 6 |
| ತಂದೆಯ ಹೆಸರು | : | ಮಹಮ್ಮದ್ | ಚಾಸಾಃ 10 |
| ಪ್ರಾಯ | : | 56 ವರ್ಷ | ದಿನಾಂಕಃ **03.09.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಫರಂಗಿಪೇಟೆ,<br>ಮಂಗಳೂರು ತಾಲೂಕು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ಚಾಸಾ.4 ನನ್ನ ಅಕ್ಕ. ಪ್ರಾಸಾ.1, ಪ್ರಾಸಾ.2, ಚಾಸಾ.3 ಮತ್ತು ಪ್ರಾಸಾ.5 ರವರು ನನ್ನ ಅಕ್ಕನ ಮಕ್ಕಳಾಗಿರುತ್ತಾರೆ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇರುತ್ತದೆ. 1ನೇ ಆರೋಪಿಯು ಪ್ರಾಸಾ.1 ರವರ ಗಂಡ. 2ನೇ ಆರೋಪಿಯು 1ನೇ ಆರೋಪಿಯ ತಾಯಿ ಎಂದು ನಮ್ಮ ಮನೆಗೆ ಬಂದಿರುತ್ತಾರೆ ಹಾಗೂ 3ನೇ ಆರೋಪಿಯು 1ನೇ ಆರೋಪಿಯ ಅಜ್ಜ ಎಂದು ಹೇಳಿ ನಮ್ಮ ಮನೆಗೆ ಬಂದಿರುತ್ತಾರೆ.

2. ಪ್ರಾಸಾ.1 ರವರಿಗೆ ಮದುವೆಯ ಬಗ್ಗೆ ಹುಡುಗನನ್ನು ಹುಡುಕುತ್ತಿದ್ದಾಗ ಮಡಿಕೇರಿಯಲ್ಲಿ ಒಂದು ಹುಡುಗ ಇದ್ದಾನೆ ಎಂದು ಪ್ರಾಸಾ.4 ರವರು ನಮಗೆ ತಿಳಿಸಿರುತ್ತಾರೆ. 1ನೇ ಆರೋಪಿಯು ಮಡಿಕೇರಿಯ ಮದರಸದಲ್ಲಿ ಮುಸ್ಲಿಯಾರ್ ಆಗಿ ಕೆಲಸ ಮಾಡುತ್ತಿದ್ದು ಹಾಗೂ ಹಾಡುಗಾರ ಸಹ ಆಗಿರುತ್ತಾನೆ. ಮದುವೆಯ ಮಾತುಕತೆಗಾಗಿ ಮಡಿಕೇರಿಯ 1ನೇ ಆರೋಪಿಯ ಮನೆಗೆ ಅಂದರೆ 3ನೇ ಆರೋಪಿಯ ಮನೆಗೆ ಪ್ರಾಸಾ.1 ರವರ ಸಹೋದರರು, ನಾನು ಹಾಗೂ ಪ್ರಾಸಾ.5 ರವರ ಗಂಡ ನವರು ಮಡಿಕೇರಿಗೆ ಹೋಗಿರುತ್ತೇವೆ. 1ನೇ ಆರೋಪಿಯು ತನಗೆ ತಾಯಿ ಇದ್ದ ವಿಷಯವನ್ನು ನಮಗೆ ತಿಳಿಸಿರುತ್ತಾನೆ. 3ನೇ ಆರೋಪಿಯು ನನ್ನ ಅಜ್ಜ ಎಂಬುದಾಗಿ 1ನೇ ಆರೋಪಿಯು ನಮಗೆ ತಿಳಿಸಿರುತ್ತಾನೆ.

ಮದುವೆಯನ್ನು ನಮ್ಮ ಮನೆಯಲ್ಲಿ ಮಾಡಿಕೊಡುವುದಾಗಿ ಹಾಗೂ ರೂ.2,00,000/- ನಗದು ಹಣವನ್ನು ಕೊಡುವುದಾಗಿ ಮತ್ತು ಚಿನ್ನವನ್ನು ಕೊಡುವಾಗಿ ಮಾತುಕತೆಯಾಗಿತ್ತು ಹಾಗೂ ಆ ರೂ.2,00,000/- ನಗದು ಹಣವನ್ನು ಮೂರು ಕಂತುಗಳಲ್ಲಿ ನೀಡುವುದಾಗಿ ಮಾತುಕತೆಯಾಗಿದ್ದು, ಅದನ್ನು ನನ್ನ ಅಳಿಯನಾದ ಪ್ರಾಸಾ.2 ರವರು ನೀಡಿರುತ್ತಾರೆ. ಸದರಿ ಹಣವನ್ನು ನಾನು ಮತ್ತು ನನ್ನ ಅಣ್ಣಂದಿರು ನೀಡಿರುತ್ತೇವೆ.

3. ಮದುವೆಯು 2014 ರಲ್ಲಿ ಕಾವು ಎಂಬಲ್ಲಿರುವ ಕುಡುಪುನಡ್ಕ ಎಂಬಲ್ಲಿರುವ ಪ್ರಾಸಾ.1 ರವರ ಮನೆಯಲ್ಲಿ ನಡೆದಿರುತ್ತದೆ. ಮದುವೆಗೆ 1ನೇ ಆರೋಪಿಯ ತಾಯಿ ಎಂದು 2ನೇ ಆರೋಪಿ ಹಾಗೂ ಅಜ್ಜ ಎಂದು 3ನೇ ಆರೋಪಿಯು ಬಂದಿರುತ್ತಾರೆ. ಮದುವೆಯಾದ ನಂತರ ಪ್ರಾಸಾ.1 ರವರನ್ನು ಮಡಿಕೇರಿಗೆ ಕರೆದುಕೊಂಡು ಹೋಗಿ, ನಂತರ ಕೇರಳ ರಾಜ್ಯದ ಕಾಂಞ್ಞಂಗಾಡ್ ಎಂಬಲ್ಲಿಗೆ ಕರೆದುಕೊಂಡು ಹೋಗಿರುತ್ತಾರೆ. 1ನೇ ಆರೋಪಿಯು ಕೇರಳ ರಾಜ್ಯದ ಕಾಂಞ್ಞಂಗಾಡ್ ಎಂಬಲ್ಲಿ ಮದರಸದಲ್ಲಿ ಕೆಲಸ ಮಾಡುತ್ತಿದ್ದು, ವಾರಕ್ಕೊಮ್ಮೆ ಮನೆಗೆ ಬರುತ್ತಿದ್ದನು ಎಂದು ಪ್ರಾಸಾ.1 ರವರು ಪ್ರಾಸಾ.5 ರವರಲ್ಲಿ ತಿಳಿಸಿರುತ್ತಾಳೆ. 1ನೇ ಆರೋಪಿಯು ವಾರಕ್ಕೊಮ್ಮೆ ಮನೆಗೆ ಬರುತ್ತಾನೆ ಎಂಬ ಅನುಮಾನದಿಂದ ಪ್ರಾಸಾ.1 ರವರು ತಮ್ಮ ಮನೆಯನ್ನು ರಿಜಿಸ್ಟರ್ ಮಾಡಿ ಎಂದು ನಮ್ಮಲ್ಲಿ ಹೇಳಿರುತ್ತಾಳೆ.

4. ಪುತ್ತೂರಿನ ಸಬ್-ರಿಜಿಸ್ಟರ್ ಕಛೇರಿಗೆ ಪ್ರಾಸಾ.1 ರವರ ಮದುವೆಯನ್ನು ರಿಜಿಸ್ಟರ್ ಮಾಡಲು ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ 1ನೇ ಆರೋಪಿಯ ಮೊದಲನೇ ಹೆಂಡತಿ ಸಬ್-ಡಿಜಿಸ್ಟರ್ ಕಛೇರಿಗೆ ಬಂದಿದ್ದರಿಂದ 1ನೇ ಆರೋಪಿಗೆ ಈಗಾಗಲೇ ಮದುವೆಯಾಗಿರುವ ವಿಷಯ ನಮಗೆ ಗೊತ್ತಾಗಿರುತ್ತದೆ. ಆದ್ದರಿಂದ 1ನೇ ಆರೋಪಿಯು ಮೋಸ ಮಾಡಿ ಮದುವೆಯಾಗಿದ್ದರಿಂದ ಪ್ರಾಸಾ.1 ರವರು ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತವನ್ನು ಪರಿಶೀಲಿಸಿ, ಸರಕಾರಿ ಅಭಿಯೋಜಕರ ಮನವಿಯನ್ನು ಮನ್ನಿಸಿ, ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

5. 2ನೇ ಆರೋಪಿಯು 1ನೇ ಆರೋಪಿಯ ತಾಯಿ ಎಂದು ಹೇಳಿ, 3ನೇ ಆರೋಪಿಯು 1ನೇ ಆರೋಪಿಯ ಅಜ್ಜ ಎಂದು ಹೇಳಿ, ಪ್ರಾಸಾ.1 ರವರನ್ನು ಮದುವೆಯಾಗಿ ಬಳಸಿಕೊಂಡು ನಂತರ ಬಿಟ್ಟು ಬಿಡುವುದಾಗಿ ಅವರೆಲ್ಲಾ ಒಳಸಂಚು ಮಾಡಿರುವ ಉದ್ದೇಶದಿಂದ ಸಹ ಪ್ರಾಸಾ.1 ರವರು ಆರೋಪಿತರ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ **1** ರಿಂದ **3**ನೇ ಆರೋಪಿತರ ಪರ ಶ್ರೀ ಎಂ**.**ಪಿ**.**ಕೆ**.** ವಕೀಲರಿಂದಃ

6. ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಅದೇ ರೀತಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಪ್ರಾಸಾ.1 ರವರು ಆರೋಪಿತರ ವಿರುದ್ಧ ಏನು ದೂರು ನೀಡಿದ್ದಾರೆ ಎಂಬುದು ನನಗೆ ಗೊತ್ತಿರುವುದಿಲ್ಲ. ಆದರೆ ಮೋಸ ಮಾಡಿರುವ ಬಗ್ಗೆ ದೂರು ನೀಡಿರುತ್ತಾರೆ ಎಂಬ ವಿಷಯ ಗೊತ್ತಿರುತ್ತದೆ. 1ನೇ ಆರೋಪಿಗೆ ಕೊಡಬೇಕಾದ ರೂ.2,00,000/- ನಗದು ಹಣದಲ್ಲಿ ರೂ.50,000/- ಹಣವನ್ನು ಕೇರಳದಲ್ಲಿ ನೀಡಿದ್ದು, ರೂ.1,00,000/- ಹಣವನ್ನು ಮದುವೆ ಸಮಯದಲ್ಲಿ ನೀಡಿದ್ದು, ಅದಕ್ಕೆ ಮಧ್ಯದಲ್ಲಿ ರೂ.50,000/- ಹಣವನ್ನು ನೀಡಿರುತ್ತಾರೆ. ಪ್ರಾಸಾ.1 ರವರಿಗೆ ಮದುವೆಯಾದ ಎರಡು ತಿಂಗಳುಗಳ ನಂತರ ನಾನು ವಿದೇಶಕ್ಕೆ ಹೋಗಿರುತ್ತೇನೆ. ಪ್ರಾಸಾ.1 ರವರಿಗೆ ಮದುವೆಯಾದ ನಂತರ ನಾನು ಅವರ ಜೊತೆ ದೂರವಾಣಿಯಲ್ಲಿ ಮಾತನಾಡಿರುವುದಿಲ್ಲ. ಪ್ರಾಸಾ.1 ರವರು 1ನೇ ಆರೋಪಿಯ ಮನೆಯಲ್ಲಿ ಯಾವ ರೀತಿ ಇದ್ದರು ಎಂಬುದರ ಬಗ್ಗೆ ನನಗೆ ಮಾಹಿತಿ

ಇರುವುದಿಲ್ಲ. ಸಬ್-ರಿಜಿಸ್ಟರ್ ಕಛೇರಿಗೆ ನಾನೂ ಸಹ ಹೋಗಿರುತ್ತೇನೆ. 1ನೇ ಆರೋಪಿಯ ಜೊತೆ ಮೊದಲನೇ ಹೆಂಡತಿಯು ಒಟ್ಟಿಗೆ ಇದ್ದರೂ ಸಹ ರೂ.2,0,000/- ನಗದು ಹಣವನ್ನು ಮತ್ತು ಚಿನ್ನವನ್ನು ನೀಡಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ.

7. 1ನೇ ಆರೋಪಿಯು ತನಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಹೇಳಿ ಪ್ರಾಸಾ.1 ರವರನ್ನು ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ವಿದೇಶದಲ್ಲಿ ಇದ್ದೆನು, ಆದ್ದರಿಂದ ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ವಿಷಯಗಳು ಸ್ವತಃ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆಃ ಪುತ್ತೂರು.